ಅತೃಪ್ತಿಯೇ ನನ್ನ ಕನಸುಗಳಿಗೆ ಕಾರಣ ಎಂದು ಹೇಳಿದಾಗ ಹೌಹಾರಿದ್ದೇನೆ.

ನನಗೆ ಬೀಳುವ ಕನಸುಗಳಾದರೂ ಎಂಥವು? ನಿಜವಾಗಿಯೂ ತಲೆಕೆಡಿಸಿಕೊಳ್ಳಬೇಕಾದ ಕನಸುಗಳೇ ಇವು ಎಂದು ಆಗಾಗ್ಗೆ ಯೋಚಿಸುತ್ತೇನೆ. ಉದಾಹರಣೆಗೆ, ನನಗೆ ಬಹಳ ಬಾರಿ ಬೀಳುವ ಒಂದು ಕನಸೆಂದರೆ, ನಾನು ಹಕ್ಕಿಯಂತೆ ಹಾರುವುದು. ಕನಸಿನಲ್ಲಿ ಹಕ್ಕಿಯಂತೆ ಹಾರಿದರೆ ಅದಕ್ಕೇಕೆ ತಲೆಕೆಡಿಸಿಕೊಳ್ಳಬೇಕು? ನನ್ನ ಗೆಳೆಯ 'ಎಷ್ಟೋ ಜನರು ಹಕ್ಕಿಯಂತೆ ಹಾರಲು ರೆಕ್ಕೆ ಕಟ್ಟಿಕೊಂಡು ಬೆಟ್ಟದಿಂದ, ಹೆಲಿಕಾಪ್ಟರಿನಿಂದ, ದೊಡ್ಡ ದೊಡ್ಡ ಕಟ್ಟಡಗಳಿಂದ ಹಾರುತ್ತಾರೆ. ನಿನಗೆ ಪ್ರಾಯಶಃ ಎತ್ತರದ ಜಾಗಗಳೆಂದರೆ ಫೋಬಿಯಾ ಇದೆ. ನಿಜಜೀವನದಲ್ಲಿ ಪೂರೈಸಿಕೊಳ್ಳಲಾಗದ್ದನ್ನು ನಿನ್ನ ಒಳಮನಸ್ಸು ಕನಸಿನಲ್ಲಿ ಪೂರೈಸಿಕೊಳ್ಳುತ್ತಿದೆ. ನಿನಗೆ ಆ ಕನಸು ಬೀಳುವುದು ಬೇಡ ಎಂದರೆ ನಿನ್ನ

